**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆ 289/2013** **CW-3 PW-3**

**ಸಾಕ್ಷಿಯನ್ನು ದಿಃ 18.03.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರುಃ | ಶಿವರಂಜಿನಿ |
| ಗಂಡನ ಹೆಸರುಃ | ಭರತ್ |
| ವಯಸ್ಸುಃ | 37 ವರ್ಷ |
| ವೃತ್ತಿಃ | ಉಪನ್ಯಾಸಕಿ |
| ವಾಸ ಸ್ಥಳಃ | ಗವೇನಹಳ್ಳಿ ಗ್ರಾಮ ಹಾಸನ |

**ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ-1 ನನ್ನ ತಂದೆ. ಚಾಸಾ-2 ನನ್ನ ತಾಯಿ. ಚಾಸಾ-4 ನನ್ನ ತಮ್ಮ. ಚಾಸಾ-5 ರಿಂದ ಚಾಸಾ-8 ಗೊತ್ತು. ಆರೋಪಿ ನನ್ನ ದೊಡ್ಡಪ್ಪ.

ದಿಃ 06.11.2012 ರಂದು ಬೆಳಗ್ಗೆ 9.00 ರ ಸಮಯದಲ್ಲಿ ನಾನು ಚಾಸಾ-2 ಮತ್ತು ಚಾಸಾ-4 ರವರು ಮನೆಯ ಒಳಗೆ ಇದ್ದಾಗ ಆರೋಪಿ ಅಂಗಡಿಯಲ್ಲಿದ್ದ ಚಾಸಾ-1 ರವರೊಂದಿಗೆ ಬಾಲಿನ ವಿಚಾರವಾಗಿ ಗಲಾಟೆ ಮಾಡುತ್ತಿದ್ದು ನಾನು ಮತ್ತು ಚಾಸಾ-2 ರವರು ಹೊರಗೆ ಬಂದು ನೋಡಿದಾಗ ಆರೋಪಿ ತನ್ನ ಬಳಿ ಇದ್ದ ಚಾಕುವಿನಿಂದ ಚಾಸಾ-1 ರವರ ಹೊಟ್ಟೆಯ ಭಾಗಕ್ಕೆ ಹೊಡೆದಿರುತ್ತಾರೆ. ಚಾಸಾ-2 ರವರ ಎಡಕೆನ್ನೆಗೆ ಹಾಗೂ ನನ್ನ ಎಡರಟ್ಟೆಗೆ ಚಾಕುವಿನಿಂದ ಹೊಡೆದಿರುತ್ತಾರೆ. ಆ ಸಮಯದಲ್ಲಿ ಚಾಸಾ-5 ರಿಂದ ಚಾಸಾ-8 ರವರು ಗಲಾಟೆ ಬಿಡಿಸಿರುತ್ತಾರೆ. ಆಗ ಆರೋಪಿ ಈ ದಿನ ತಪ್ಪಿಸಿಕೊಂಡಿದ್ದೀರ ಮುಂದಿನ ದಿಗಳಲ್ಲಿ ನಿಮ್ಮನ್ನು ಕೊಲೆ ಮಾಡುತ್ತೇನೆ ಎಂದು ಕೊಲೆ ಬೆದರಿಕೆ ಹಾಕಿರುತ್ತಾರೆ. ಚಾಸಾ-4 ಮತ್ತು ಊರಿನವರು ನಮ್ಮನ್ನು ಚನ್ನರಾಯಪಟ್ಟಣ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಬಂದಿದ್ದು, ನನಗೆ ಹೆಚ್ಚಿನ ಚಿಕಿತ್ಸೆಗೆ ಹಾಸನದ ಎಸ್ ಎಸ್ ಎಂ ಆಸ್ಪತ್ರೆಗೆ ಸೇರಿಸಿರುತ್ತಾರೆ. ಚಾಸಾ-1

ರವರ ಹೇಳಿಕೆಯನ್ನು ಆಸ್ಪತ್ರೆಯಲ್ಲಿ ಪಡೆದಿರುತ್ತಾರೆ. ಈ ರೀತಿ ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನ್ಯಾಯಾಲಯದಲ್ಲಿರುವ ಮು ಮಾ –1 ನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಘಟನಾ ಸಮಯದಲ್ಲಿ ಆರೋಪಿ ಚಾಸಾ–1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿದ್ದರು ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಮ್ ಹೆಚ್ ಜಿ ರವರಿಂದ ಃ**

ನನಗೂ ಆರೋಪಿಗೂ ನಾನು ಹುಟ್ಟಿದಾಗಿನಿಂದ ಮಾತುಕತೆ ಇಲ್ಲ ಎಂದರೆ ಸರಿ. ಸಾಕ್ಷಿಗೆ ಸಿಸಿ ಸಂಖ್ಯೆ 1/1994 ರ ಆರೋಪಣೆ ಮತ್ತು ದೋಷಾರೋಪಣ ಪತ್ರ ತೋರಿಸಲಾಗಿ ಆರೋಪಿ ನನ್ನ ತಂದೆ ಮತ್ತು ತಾಯಿಯ ವಿರುದ್ಧ ಒಂದು ಕ್ರಿಮಿನಲ್ ಪ್ರಕರಣ ಹೂಡಿದ್ದರು ಎಂದು ಒಪ್ಪಿದ್ದು ಸದರಿ ದಾಖಲೆಯನ್ನು ನಿಡಿ–1 ಎಂದು ಗುರುತಿಸಲಾಯಿತು. ನನ್ನ ತಂದೆ ತಾಯಿ ಹಾಗೂ ಆರೋಪಿಯ ವಿರುದ್ಧ ಮನೆಯ ವಿಚಾರವಾಗಿ ಸಿವಿಲ್ ದಾವೆ ಇದೆ ಎಂದರೆ ಸರಿ. ನಮ್ಮ ಮತ್ತು ಆರೋಪಿಯ ಮನೆಗೆ ಒಂದೇ ಗೋಡೆ ಎಂದರೆ ಸರಿ. ನಮ್ಮ ಮನೆಗಳು ರಸ್ತೆಯ ಪಕ್ಕದಲ್ಲಿ ಇದೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ಹೆಚ್ಚಿನ ಜನ ಓಡಾಡುತ್ತಾರೆ ಎಂದರೆ ಸರಿ. ನಾನು ಮನೆಯ ಒಳಗೆ ಇದ್ದು ಘಟನೆಯನ್ನು ಪ್ರತ್ಯಕ್ಷವಾಗಿ ನೋಡಿಲ್ಲ ಎಂದರೆ ಸರಿಯಲ್ಲ. ಅಲ್ಲಿ ಎಷ್ಟು ಜನ ಸೇರಿದ್ದರು ಎಂದು ಹೇಳಲಾಗುವುದಿಲ್ಲ. ಘಟನೆ ನಡೆದ ನಂತರ ನಾನು 15–20 ನಿಮಿಷ ಇದ್ದೆ. ನಮ್ಮನ್ನು ಒಮಿನಿ ಕಾರಿನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ರಕ್ತದ ಕಲೆ ಆಗಿದ್ದ ಬಟ್ಟೆಗಳು ನಮ್ಮ ಬಳಿ ಇವೆ. ಪೋಲೀಸರಿಗೆ ನೀಡಿಲ್ಲ. ಮು ಮಾ–1 ರ ರೀತಿಯ

ಚಾಕುಗಳು ಮನೆಗಳಲ್ಲಿ ಮತ್ತು ಮಾರುಕಟ್ಟೆಯಲ್ಲಿ ದೊರೆಯುತ್ತವೆ ಎಂದರೆ ಸರಿ. ಮು ಮಾ-1 ಕ್ಕೆ ವಿಶೇಷ ಗುರುತು ಇಟ್ಟಿಲ್ಲ ಎಂದರೆ ಸರಿ. ನಮ್ಮ ಮತ್ತು ಆರೋಪಿಯ ನಡುವೆ ಸಿವಿಲ್ ವ್ಯಾಜ್ಯ ಇದ್ದು ದ್ವೇಷ ಇರುವುದರಿಂದ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-5 ರಿಂದ ಚಾಸಾ-8 ರವರು ನಮ್ಮೊಂದಿಗೆ ಚೆನ್ನಾಗಿದ್ದಾರೆ ಎಂದರೆ ಸರಿ. ಯಾವುದೇ ಘಟನೆ ನಡೆಯದಿದ್ದರು ಸದರಿಯವರೊಂದಿಗೆ ಷರೀಕ್ಕಾಗಿ ಚಾಸಾ-1 ರವರಿಂದ ಸುಳ್ಳು ದೂರು ನೀಡಿದ್ದೇವೆ ಎಂದರೆ ಸರಿಯಲ್ಲ. ನಾವು ಆರೋಪಿಯ ಕುಟುಂಬದವರ ವಿರುದ್ಧ ವಿನಾಃಕಾರಣ ತೊಂದರೆ ನೀಡುತ್ತಲೇ ಬಂದಿದ್ದೇವೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾವು ಸಹ ಆರೋಪಿಯ ಮೇಲೆ ಹಲ್ಲೆ ಮಾಡಿದ್ದು ಸದರಿ ಪ್ರಕರಣ ಈ ನ್ಯಾಯಾಲಯದಲ್ಲಿದೆ ಎಂದರೆ ಸರಿ. ನಮ್ಮ ವಿರುದ್ಧ ನೀಡಿದ್ದ ದೂರಿನಿಂದ ತಪ್ಪಿಸಿಕೊಳ್ಳಲು ಆರೋಪಿಯ ವಿರುದ್ಧ ಈ ಸುಳ್ಳು ದೂರನ್ನು ನೀಡಿದ್ದಾರೆ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ನೀಡು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**(ಕುಸುಮ ವಿ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.**